# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1415 |
| ಸದಸ್ಯರ ಹೆಸರು | : | ಡಾ|| ಎಂ.ಜಿ. ಮುಳೆ (ವಿಧಾನ ಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 20.03.2025 |
| ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಅತ್ಯಂತ ಹಳೆಯ ಕಾರ್ಖಾನೆಯಾಗಿದ್ದು. ಇದು ಲಾಭದಲ್ಲಿದೆಯೇ: ಅಥವಾ ನಷ್ಟದಲ್ಲಿದೆಯೇ: | ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ(ಕೆ.ಎಸ್.&ಡಿ.ಎಲ್.) ಸಂಸ್ಥೆಯು ಒಂದು ಲಾಭದಾಯಕ ಸಾರ್ವಜನಿಕ ಉದ್ಯಮವಾಗಿರುತ್ತದೆ. |
| ಆ) | ಇಲ್ಲಿ ತಯಾರಿಸುವ ಮೈಸೂರು ಸ್ಯಾಂಡಲ್ ಸೋಪು ಈ ಹಿಂದೆ ಅತೀ ಹೆಚ್ಚಿನ ಪ್ರಸಿದ್ಧಿ ಹೊಂದಿದ್ದು, ಈಗ ಇದರ ಗುಣಮಟ್ಟ ಕಡಿಮೆಯಾಗಿದೆ ಎಂಬ ಆರೋಪ ಸಾರ್ವಜನಿಕ ವಲಯದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದರೆ ಇದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ: | ಕೆಎಸ್&ಡಿಎಲ್ ಸಂಸ್ಥೆಯು ನೈಸರ್ಗಿಕ ಪರಿಶುದ್ಧ ಶ್ರೀಗಂಧದೆಣ್ಣೆ ಅನ್ನು ಬಳಿಸಿ, 1918 ರಿಂದ "ಮೈಸೂರು ಸ್ಯಾಂಡಲ್ ಸೋಪ್" ಅನ್ನು ತಯಾರಿಸಿ. ಮಾರುಕಟ್ಟೆಗೆ ಒದಗಿಸುತ್ತಿದೆ. ಮೈಸೂರು ಸ್ಯಾಂಡಲ್ ಸೋಪ್ ತನ್ನ ಪರಿಮಳದಿಂದ ವಿಶ್ವ ಖ್ಯಾತಿ ಮನ್ನಣೆಯನ್ನು ಗಳಿಸಿದೆ.<br><br>ಕೆಎಸ್&ಡಿಎಲ್ ಸಂಸ್ಥೆಯು ಬಳಕೆದಾರರ ಸಂತೃಪ್ತಿಗಾಗಿ ತನ್ನ ಸಂಪೂರ್ಣ ಗುಣಾತ್ಮಕ ಕಾರ್ಯನಿರ್ವಹಣೆ ಹಾಗೂ ನಿರಂತರ ಅಭಿವೃದ್ಧಿಗಾಗಿ ಕೆಎಸ್&ಡಿಎಲ್ ತನ್ನ ಎಲ್ಲಾ ಉದ್ಯೋಗಿಗಳನ್ನು ತೊಡಗಿಸಿಕೊಳ್ಳುವ ಮೂಲಕ ವಚನ ಬದ್ಧವಾಗಿರುತ್ತದೆ. ಸಂಸ್ಥೆಯು ಐಎಸ್ಓ-9001/2015 ಗುಣ ನೀತಿ ಪ್ರಮಾಣ ಪತ್ರವನ್ನು ಪಡೆದಿರುತ್ತದೆ.<br><br>"ಮೈಸೂರು ಸ್ಯಾಂಡಲ್ ಸೋಪ್" ತಯಾರಿಕೆಗೆ ಬಳಸುವಂತಹ, ಕಚ್ಚಾವಸ್ತುಗಳು ಐಎಸ್ ಮಾನದಂಡಗಳಿಗೆ ಒಳಪಟ್ಟಿರುತ್ತವೆ. ಕಳಪೆ ಗುಣಮಟ್ಟದ ಕಚ್ಚಾವಸ್ತುಗಳ ಬಳಕೆಗೆ ಇಲ್ಲಿ ಅಸ್ಪದವಿರುವುದಿಲ್ಲ. ಹಾಗಾಗಿ 1918 ರಿಂದ ಇಲ್ಲಿಯವರೆಗೆ ಮೈಸೂರು ಸ್ಯಾಂಡಲ್ ಸೋಪ್‌ನ ತಯಾರಿಕೆಯಲ್ಲಿ ಗುಣಮಟ್ಟಕ್ಕೆ ದಕ್ಕೆಯಾಗದಂತೆ ಎಚ್ಚರ ವಹಿಸಲಾಗಿದೆ. |

| | | |
|---|---|---|
| ಇ) | ಕೆಲವು ದಿನಗಳ ಹಿಂದೆ ಇಲ್ಲಿ ಅವ್ಯವಹಾರ ನಡೆದಿದೆ ಎಂದು ವರದಿಯಾಗಿದ್ದು, ಈ ಬಗ್ಗೆ ತನಿಖೆಯಾಗಿ ವರದಿ ಬಂದಿದೆಯೇ: ಬಂದಿದ್ದರೆ ಯಾವ ಕ್ರಮ ಕೈಗೊಳ್ಳಲಾಗಿದೆ: | ಕೆಎಸ್&ಡಿಎಲ್ ಸಂಸ್ಥೆಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಯಾವುದೇ ಲಿಖಿತ ದೂರುಗಳು ದಾಖಲಾಗಿರುವುದಿಲ್ಲ. ಅಲ್ಲದೇ ಸಂಸ್ಥೆಯಲ್ಲಿ ಯಾವುದೇ ತನಿಖೆ ನಡೆದಿರುವುದಿಲ್ಲ. |
| (ಈ) | ಮೈಸೂರು ಸ್ಯಾಂಡಲ್ ಸೋಪು ಮತ್ತಿತರ ಉತ್ಪನ್ನಗಳ ಜನಪ್ರಿಯತೆಯನ್ನು ಹೆಚ್ಚಿಸಲು ಯಾವ ಸುಧಾರಣಾ ಕಾರ್ಯವನ್ನು ಕೈಗೊಳ್ಳಲಾಗುವುದು? | ಮೈಸೂರು ಸ್ಯಾಂಡಲ್ ಸೋಪು ಈಗಾಗಲೇ ಪ್ರಪಂಚದಾದ್ಯಂತ ಜನ ಮನ್ನಣೆಯನ್ನು ಗಳಿಸಿದೆ. ಆದರೂ ಕೂಡ, ಜಗತ್ತಿನ ಮೂಲೆ ಮೂಲೆಗಳಿಗೆ ಮೈಸೂರು ಸ್ಯಾಂಡಲ್ ಸೋಪಿನ ಪರಿಮಳವನ್ನು ಇನ್ನಷ್ಟು ಹಬ್ಬಿಸಲು ಆಧುನಿಕ ಮಾರುಕಟ್ಟೆ ತಂತ್ರಗಳನ್ನು ಅಳವಡಿಸಿಕೊಳ್ಳಲಾಗಿದೆ. ಯೂಟ್ಯೂಬ್, ಎಕ್ಸ್, ಫೇಸ್ಬುಕ್, ಟ್ರೂ ಕಾಲರ್ ಮತ್ತು ವಾಟ್ಸಪ್ ಮುಖಾಂತರ ಜಾಹೀರಾತುಗಳನ್ನು ನೀಡಲಾಗುತ್ತಿದೆ. ಇದರಿಂದ ಪ್ರಪಂಚದ ಅತ್ಯಧಿಕ ಜನರಿಗೆ ಉತ್ಪನ್ನಗಳ ಬಗ್ಗೆ ಮಾಹಿತಿ ಲಭಿಸಲು ಸಹಕಾರಿಯಾಗಿದೆ.<br><br>ಸಾಂಪ್ರದಾಯಿಕ ಮೈಸೂರು ಸ್ಯಾಂಡಲ್ ಸೋಪು ಒಂದು ಕಡೆಯಾದರೆ, ಯುವ ಪೀಳಿಗೆ ಬಳಸುವ ದ್ರವ ರೂಪದ ಸಾಬೂನು, ಹೈಜಿನಿಕ್ ಹ್ಯಾಂಡ್ ವಾಶ್ ಲಿಕ್ವಿಡ್, ಶವರ್ ಜೆಲ್, ವಿವಿಧ ವೈಯಕ್ತಿಕ ಆರೈಕೆ ಉತ್ಪನ್ನಗಳನ್ನೂ (ಕ್ರೀಮ್ಸ್, ಲೋಷನ್ಸ್, ಫೇಸ್ ಪ್ಯಾಕ್ ಇತ್ಯಾದಿ) ಕೂಡ ಶ್ರೀಗಂಧದೆಣ್ಣೆ ಬಳಸಿ ಅಭಿವೃದ್ಧಿ ಪಡಿಸಲಾಗಿದೆ. ಈ ರೀತಿಯ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆಗೊಳಿಸಿ ಪ್ರಪಂಚದಾದ್ಯಂತ ಇನ್ನೂ ಹೆಚ್ಚಿನ ಜನಪ್ರಿಯತೆಯನ್ನು ಗಳಿಸಲು ಯೋಜನೆ ರೂಪಿಸಲಾಗಿದೆ. |

ಸಂಖ್ಯೆ:ಸಿಐ 21 ಸಿಪಿಎಂ 2025 (ಇ)

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು